ಭಾಷೆಯ ಬಗೆಗೆ ಯೋಚಿಸುತ್ತೇನೆ. ಭಾಷೆ ಹೇಗೆ ಧ್ವನಿಸುತ್ತದೆ ಎಂದು ತಿಳಿಯಲು ಯತ್ನಿಸುತ್ತೇನೆ. ನಂಗೆ ಭಾಷೆ ಅಂದರೆ ಬಹಳ ಇಷ್ಟ. ಭಾಷೆ ನಮಗೆ ಒದಗಿಬರುವ ಬಗ್ಗೆ, ಭಾಷೆ ನಮ್ಮ ನೋವು, ಗೆಲುವುಗಳನ್ನು ಹೇಳಿಕೊಳ್ಳಲು ನೆರವಾಗುವ ರೀತಿ, ನಮ್ಮ ಅಸ್ತಿತ್ವದ ಸೂಕ್ಷ್ಮತೆಗಳನ್ನು, ನವಿರುತನವನ್ನು ತೋರಿಸುವ ರೀತಿ ಕಂಡು ನನಗೆ ಅದರ ಬಗ್ಗೆ ಪ್ರೀತಿ ಹುಟ್ಟುತ್ತದೆ. ಅದು ನಮ್ಮನ್ನು ನಗಿಸುತ್ತದೆ. ಭಾಷೆಯಲ್ಲಿ ಮಾತ್ರ ನಿಜವಾದ ವ್ಯಂಗ್ಯ ಕಾಣಲು ಸಾಧ್ಯ. ನಮಗೆ ಭಾಷೆ ಬೇಕು.

**◆ ಬಾಲ್ಡ್‌ವಿನ್ ಹೇಳಿದರು, ಅವರ ಕುಟುಂಬದವರು ಅವರು ಲೇಖಕನಾಗಲು ಒಪ್ಪಲಿಲ್ಲವಂತೆ. ಪ್ರಕಾಶನ ಕ್ಷೇತ್ರವು ಬಿಳಿಯರ ಏಕಸ್ವಾಮ್ಯದಲ್ಲಿದೆ ಎನ್ನುವುದು ಅವರ ತಂದೆಯ ಅಭಿಪ್ರಾಯವಾಗಿತ್ತಂತೆ. ಕಪ್ಪು ಬರಹಗಾರರಿಗೆ ಪ್ರವಾಹದ ವಿರುದ್ಧ ಈಜುವಂತಹ ಪರಿಸ್ಥಿತಿ ಇದೆ ಎಂದು ನಿಮಗೂ ಅನ್ನಿಸಿದೆಯೇ?**

ಹೌದು. ಅದು ಬರವಣಿಗೆಯಲ್ಲಿ ಮಾತ್ರವಲ್ಲ ನಾನು ಪ್ರಯತ್ನಿಸಿದ ಎಲ್ಲ ಸಂಗತಿಗಳಲ್ಲಿ ಇದನ್ನು ನೋಡಿದ್ದೇನೆ. ಅಮೆರಿಕನ್ ಸಮಾಜದಲ್ಲಿ ಬಿಳಿ ಗಂಡಸರು ಮೇಲಿನ ಹಂತದಲ್ಲಿ, ಅವರ ಕೆಳಗೆ ಬಿಳಿ ಹೆಂಗಸರು, ಅವರ ಕೆಳಗೆ ಕರಿಯ ಗಂಡಸರು ಮತ್ತು ಕಟ್ಟಕಡೆಯಲ್ಲಿ ಕರಿಯ ಹೆಂಗಸರು. ಇದು ಹೊಸತೇನಲ್ಲ, ಎಂದಿನಿಂದಲೂ ಇದೆ. ಇದರಿಂದ ನನಗೆ ಆಘಾತವಾಗಿಲ್ಲ, ಇದು ನನ್ನ ಕಾಡಿಲ್ಲ ಅಂತಲ್ಲ.

**◆ ವಿವಿಧ ಸಾಮಾಜಿಕ ಶ್ರೇಣೀಕರಣಗಳಲ್ಲಿ ಇದರ ಸ್ವರೂಪ ಅರ್ಥವಾಗುತ್ತದೆ. ಕಲೆಯಲ್ಲಿ ಈ ತಾರತಮ್ಯ ಏಕೆ?**



**‘ ಪಶ್ಚಿಮ ಆಫ್ರಿಕಾದ ಗಹಾನದಲ್ಲಿ, ‘ಅಂತರಾಳದ ಮಾತು’ ಎನ್ನುವ ನುಡಿಗಟ್ಟಿದೆ. ಉದಾಹರಣೆಗೆ ಈ ಮಾತನ್ನು ನೋಡಿ: ಕಳ್ಳನಿಗೆ ಒಡೆಯನ ಕೊಂಬುವಾದ್ಯವನ್ನು ಕದಿಯುವುದು ಕಷ್ಟವಲ್ಲ. ಅವನ ಕಷ್ಟ ಅದನ್ನು ತೆಗೆದುಕೊಂಡು ಹೋಗಿ ಊದುವುದೆಲ್ಲಿ ಅಂತ. ಮೇಲ್ನೋಟಕ್ಕೆ ಕಾಣುವ ಅರ್ಥ ಸುಲಭವಾಗಿ ತಿಳಿಯುತ್ತದೆ. ಅದರ ಒಳಾರ್ಥವನ್ನು ತಿಳಿದರೆ ಅದು ನಿಮ್ಮನ್ನು ಆಳದಲ್ಲಿ ಕಲಕುತ್ತದೆ.**